# ಹಿರಾನಿ ಮುಂದೇನು?



ಯಶಸ್ಸು, ಕೀರ್ತಿ ಮತ್ತು ಹಣ ಮನುಷ್ಯನನ್ನು ನಾಶಗೊಳಿಸುತ್ತದೆಯೆ? ಉತ್ತರ ಕಷ್ಟ. ಆದರೆ ಈ ಮೂರೂ ಕೈವಶವಾದಾಗ ಮನುಷ್ಯನ ಮನಸ್ಸು ಕೈಜಾರುತ್ತದೆ ಎನ್ನುವುದು ಮಾತ್ರ ಬಹುತೇಕ ನಿಜ. ಇದಕ್ಕೆ ಹೊಸ ಉದಾಹರಣೆ ರಾಜ್‌ಕುಮಾರ್ ಹಿರಾನಿ. ಬಾಲಿವುಡ್‌ನಲ್ಲಿ ಇತ್ತೀಚಿನ ವರ್ಷಗಳಲ್ಲಿ ಅತ್ಯಂತ ಹೆಚ್ಚು ವಿಮರ್ಶಕರ ಮೆಚ್ಚುಗೆ ಪಡೆದ ಹಾಗೂ ಅದೇ ವೇಳೆ ಜನಸಾಮಾನ್ಯರ ಮನಗೆದ್ದ ಸಿನಿಮಾಗಳನ್ನು ನಿರ್ದೇಶಿಸಿದಾತ ಈ ಹಿರಾನಿ.

ಕಳೆದ 15 ವರ್ಷಗಳಲ್ಲಿ ರಾಜ್‌ಕುಮಾರ್ ಹಿರಾನಿ ನಿರ್ದೇಶಿಸಿದ ಐದು ಚಿತ್ರಗಳು ಬಾಲಿವುಡ್‌ನಲ್ಲಿ ಹೊಸ ಸಂಚಲನ ಮೂಡಿಸಿದವು. ಆ ಐದೂ ಚಿತ್ರಗಳಲ್ಲಿ ಜನಸಾಮಾನ್ಯನ ಅಂತರಂಗದ ಮೌಲ್ಯಗಳಿಗೆ ಕಾವುಕೊಟ್ಟು ನಿರೂಪಿಸಿದ ಕಥನಕ್ರಮ ಚಿತ್ರಗಳನ್ನು ಸೂಪರ್‌ಹಿಟ್ ಮಾಡಿದವು. 56ರ ಹರೆಯದಲ್ಲೇ ಹಿರಾನಿಗೆ ಖ್ಯಾತಿ, ಹಣ, ಕೀರ್ತಿ ಎಲ್ಲವೂ ಪದತಲದಲ್ಲಿ ಬಂದು ಬಿದ್ದವು. ಆದರೆ ಈಗ ಎಲ್ಲವೂ ಮಣ್ಣುಪಾಲಾಗಿದೆ. ಅದಕ್ಕೆ ಕಾರಣ ಒಬ್ಬ ಹೆಣ್ಣುಮಗಳು. ವಿಧುವಿನೋದ್ ಚೋಪ್ರಾ ಫಿಲಂಸ್ ಕಂಪನಿಗಾಗಿ ಹಿರಾನಿ ನಿರ್ದೇಶಿಸಿದ 'ಸಂಜು' ಚಿತ್ರದಲ್ಲಿ ಸಹಾಯಕಿಯಾಗಿದ್ದ ಆ ಹೆಣ್ಣಮಗಳು. 'ರಾಜ್‌ಕುಮಾರ್ ಹಿರಾನಿ ನನ್ನ ಮೇಲೆ ಲೈಂಗಿಕ ದೌರ್ಜನ್ಯ ಎಸಗಿದ್ದಾರೆ' ಎಂದು ಆಕೆ ನಿರ್ಮಾಪಕರಿಗೆ ಕಳುಹಿಸಿದ ಇಮೇಲ್, ಬಾಲಿವುಡ್‌ನ ಮೇಲೆ ದೊಡ್ಡ ಬಾಂಬ್ ಒಂದನ್ನು ಹಾಕಿದಂತೆ ಆಯಿತು. 'ಅವತ್ತು ಏಪ್ರಿಲ್ 8. ಹಿರಾನಿಯವರು ನನ್ನ ಜೊತೆಗೆ ಕೆಟ್ಟ ರೀತಿಯಲ್ಲಿ ಮಾತನಾಡಿದರು. ಅವತ್ತು ರಾತ್ರಿ ಅವರ ಗೃಹಕಚೇರಿಯಲ್ಲಿ ನನ್ನ ಮೇಲೆ ಲೈಂಗಿಕ ದೌರ್ಜನ್ಯ ನಡೆಸಿದರು. ಆ ಬಳಿಕ ಆರು ತಿಂಗಳ ಕಾಲ ನನ್ನ ಮನಸ್ಸು, ದೇಹ ಮತ್ತು ಹೃದಯದ ಪೂರ್ಣ ಉಲ್ಲಂಘನೆಯಾಯಿತು' ಎನ್ನುವ ಆಕೆಯ ಇಮೇಲ್, ವಿಧು ವಿನೋದ್ ಚೋಪ್ರಾ ಅವರ ಚಿತ್ರವಿಮರ್ಶಕಿ ಪತ್ನಿಗೂ ತಲುಪಿತು.

'ಇದು ಸಂಪೂರ್ಣ ಸುಳ್ಳು. ಎರಡು ತಿಂಗಳ ಹಿಂದೆ ಈ ಆರೋಪ ಬಂದಾಗ, ಆಕೆಗೆ ಕಾನೂನು ಕ್ರಮ ಕೈಗೊಳ್ಳಿ ಅಥವಾ ಆಂತರಿಕ ಸಮಿತಿಗೆ ದೂರು ನೀಡಿ ಎಂದೆ. ಆದರೆ ಆಕೆ ಮಾಧ್ಯಮದ ಮೊರೆ ಹೋದರು' ಎಂದು ಹಿರಾನಿ ಸ್ಪಷ್ಟೀಕರಣ ನೀಡಿದರು. ಹಿರಾನಿ ಚಿತ್ರದಲ್ಲಿ ನಟಿಸಿದ ಒಂದಿಬ್ಬರು ನಟ, ನಟಿಯರು 'ಈ ಆರೋಪ ಸುಳ್ಳು. ಹಿರಾನಿ ಅಂಥವರಲ್ಲ' ಎಂದು ಸಮರ್ಥಿಸಿದರು. ವಿಧು ವಿನೋದ್ ಚೋಪ್ರಾ, ಪ್ರಕರಣದ ತನಿಖೆಗೆ ಆಂತರಿಕ ಸಮಿತಿ ರಚಿಸಿದ್ದಾರೆ. ಈ ಮಧ್ಯೆ ಹಿರಾನಿ ಸಹನಿರ್ಮಾಪಕ ಆಗಿದ್ದ ವಿಧು ವಿನೋದ್ ಚೋಪ್ರಾ ಅವರ 'ಏಕ್ ಲಡ್ಕೀ ಕೊ ದೇಖಾ ತೊ ಐಸಾ ಲಗಾ' ಎನ್ನುವ ಚಿತ್ರದ ಪ್ರಚಾರದಿಂದ ಹಿರಾನಿ ಹೆಸರು ಕೈಬಿಡಲಾಗಿದೆ. ಎಲ್ಲಕ್ಕಿಂತ ಮುಖ್ಯವಾಗಿ 'ಮುನ್ನಾಭಾಯಿ ಎಂಬಿಬಿಎಸ್' ಚಿತ್ರದ ಮೂರನೇ ಭಾಗ ಶೂಟಿಂಗ್ ಆರಂಭಕ್ಕೆ ತಡೆ ಬಿದ್ದಿದೆ. ಫಾಕ್ಸ್ ಫಿಲಂಸ್‌ನವರು ನಿರ್ಮಿಸಬೇಕಿದ್ದ ಚಿತ್ರವನ್ನು ಹಿರಾನಿ ನಿರ್ದೇಶಿಸುವುದು ಸದ್ಯಕ್ಕೆ ಬೇಡ ಎಂಬ ತೀರ್ಮಾನಕ್ಕೆ ಬರಲಾಗಿದೆ.

ಹಿರಾನಿ ಬಾಲಿವುಡ್‌ನಲ್ಲಿ ಏಕಾಏಕಿ ಯಶಸ್ಸಿನ ಶಿಖರಕ್ಕೆ ಏರಿದವರಲ್ಲ. ಬಾಲಿವುಡ್ ಪಯಣ ಮುಗ್ಗರಿಸಿಯೇ ಆರಂಭವಾದದ್ದು. ಕಾಲೇಜು ಮುಗಿದ ಬಳಿಕ ನಟನಾ ತರಬೇತಿ ಶಾಲೆಯೊಂದಕ್ಕೆ ಸೇರಿದ್ದರು. ಆದರೆ ಅಲ್ಲಿನ ವಾತಾವರಣ ಹಿಡಿಸದೆ ವಾಪಸ್ ಬಂದರು. ಆ ಬಳಿಕ ಪುಣೆ ಫಿಲಂ ಇನ್‌ಸ್ಟಿಟ್ಯೂಟ್‌ನಲ್ಲಿ ನಿರ್ದೇಶನ ಕಲಿಯಲು ಅರ್ಜಿ ಹಾಕಿದರು. ಆದರೆ ಸೀಟು ಸಿಗದೆ, ಎಡಿಟಿಂಗ್ ಕೋರ್ಸ್‌ಗೆ ಸೇರಿಕೊಳ್ಳಬೇಕಾಯಿತು. ಕೋರ್ಸ್ ಮುಗಿಸಿ ಬಾಲಿವುಡ್‌ಗೆ ಬಂದು ಹಲವು ಚಿತ್ರಗಳಲ್ಲಿ ಎಡಿಟರ್ ಆಗಿ ದುಡಿದರೂ ಯಶಸ್ಸು ಕಾಣಲಿಲ್ಲ. ಕೊನೆಗೆ ಜಾಹೀರಾತು ಸಂಸ್ಥೆಯೊಂದಕ್ಕೆ ಎಡಿಟರ್ ಆಗಿ ಸೇರಿದರು. ಅಲ್ಲಿ ನಿಧಾನಕ್ಕೆ ಜಾಹೀರಾತು ಚಿತ್ರಗಳ ನಿರ್ದೇಶನ, ನಿರ್ಮಾಣ ನಡೆಸಿದರು. ಆರಂಭದಲ್ಲಿ ಫೆವಿಕಾಲ್ ಕಂಪನಿಗೆ ಈತ ನಿರ್ದೇಶಿಸಿದ ಜಾಹೀರಾತು ಗೆದ್ದಿತು. ಅದರಲ್ಲಿ ಇದೇ ಹಿರಾನಿ 'ಜೋರ್ ಲಗಾಕೆ ಐಸಾ' ಎಂಬ ಡೈಲಾಗಿನೊಂದಿಗೆ ಕಾಣಿಸಿಕೊಂಡಿದ್ದಾರೆ. ಬಳಿಕ ಕೆನೆಟಿಕ್ ಲೂನಾ ಮತ್ತಿತರ ಜಾಹೀರಾತುಗಳು ಗೆದ್ದವು.

'ಮಿಶನ್ ಕಾಶ್ಮೀರ್'ನಲ್ಲಿ ಎಡಿಟರ್ ಆದರೂ, ಯಶಸ್ಸು ಲಭಿಸಿದ್ದು 'ಮುನ್ನಾಭಾಯಿ ಎಂಬಿಬಿಎಸ್' ನಿರ್ದೇಶನದಲ್ಲಿ. ಬಳಿಕ ಬಂದ 'ಲಗೇ ರಹೊ ಮುನ್ನಾಭಾಯಿ', 'ಥ್ರೀ ಈಡಿಯಟ್ಸ್', 'ಪೀಕೆ' ಮತ್ತು 'ಸಂಜು' ಚಿತ್ರಗಳು ನಿರ್ದೇಶಕರಾಗಿ ಹಿರಾನಿಯನ್ನು ಆಕಾಶಕ್ಕೆ ಒಯ್ದವು. ಈಗ ಪ್ರಪಾತದತ್ತ ಪಯಣ.

ಹಿರಾನಿಯ ತಂದೆ ಸುರೇಶ್ ಹಿರಾನಿ ಪಾಕಿಸ್ತಾನದಿಂದ ಭಾರತಕ್ಕೆ ವಲಸೆ ಬಂದಾಗ 14ರ ಹರೆಯ. ಆತ ಸ್ವಂತ ಬದುಕು ಕಟ್ಟಿಕೊಂಡ. ನಾಗಪುರದಲ್ಲಿ ಕೇವಲ 2 ಟೈಪ್‌ರೈಟರ್‌ಗಳೊಂದಿಗೆ ಟೈಪಿಂಗ್ ತರಬೇತಿ ಸಂಸ್ಥೆ ಶುರುಮಾಡಿ, ಒಂದು ಹಂತದಲ್ಲಿ 16 ಬ್ಯಾಚ್‌ನಲ್ಲಿ ದಿನಕ್ಕೆ ಸಾವಿರ ವಿದ್ಯಾರ್ಥಿಗಳಿಗೆ ಟೈಪಿಂಗ್ ಕಲಿಸತೊಡಗಿದ್ದ. ಆದರೆ ಕಂಪ್ಯೂಟರ್ ಬಂದ ಬಳಿಕ ಆ ಸಂಸ್ಥೆ ಬಾಗಿಲು ಮುಚ್ಚಿತು. ಅಪ್ಪನ ಜೀವನದಲ್ಲಿ ನಡೆದ ಈ ಹಾವುಏಣಿಯಾಟ ಈಗ ಮಗನ ಜೀವನದಲ್ಲೂ ನಡೆದಿದೆ. ಆದರೆ ಅಪ್ಪನದ್ದು ತಪ್ಪಿರಲಿಲ್ಲ. ಮಗನದ್ದು? ಕಾಲವೇ ಉತ್ತರಿಸಬೇಕು.

■ ಬಿಂದು

Printed and Published by B.A. Ravi on behalf of The Printers (Mysore) Private Ltd. Printed at M/s Rajhan's Enterprises, No.134, 4th Main Road, Industrial Town, Rajajinagar, Bangalore - 560044 and published from The Printers (Mysore) Private Ltd., Plot Nos. 7 to12, Kumbalgodu Industrial Area, II Phase, Bengaluru - 560074. Editor: K.N. TILAK KUMAR.
Editorial Office: 75, M.G Road, Bengaluru-560 001 E-mail:editorsu@sudha.co.in. Phone: 2588 0000, Fax: 25880618, Editorial:25880619, Circ:1800-425-8009, Advt: 1800-425-8008, ©All rights reserved. Reproduction in whole or in part without permission is prohibited.
RNI No 7891/65